ಇಲಾಖಾ ಪುನರ್ ರಚನೆಯ ಆದೇಶದ ಸಂ:ಎಹೆಚ್ 278 : ಎಎಂಎಲ್ 94 ದಿ : 31-5-95ರ ಪ್ರಕಾರ ಇನ್ನು ಮುಂದೆ ಕೃಷಿ ಸಹಾಯಕರ ನೇಮಕಾತಿಗೆ ಅವಕಾಶವಿರುವುದಿಲ್ಲ. ಈ ಹುದ್ದೆಗಳನ್ನು 2:1ರ ಅನುಪಾತದಲ್ಲಿ ಸಹಾಯಕ ಕೃಷಿ ಅಧಿಕಾರಿ ಹುದ್ದೆಗೆ ಪರಿವರ್ತನೆ ಮಾಡಿ, ಕೃಷಿ ಪದವೀಧರರನ್ನು ಆಯ್ಕೆ ಮೂಲಕ ಭರ್ತಿ ಮಾಡಲಾಗುತ್ತದೆ.

ಆ) ಇಲ್ಲಿಯವರೆಗೆ (ಫೀಲ್ಡ್ ಅಸಿಸ್ಟೆಂಟ್, ಫೀಲ್ಡ್‌ಮನ್ ಗ್ರಾಮಸೇವಕರು, ಕೃಷಿ ಸಹಾಯಕರು ಸೇರಿ) ಒಟ್ಟಾರೆ 9055 ಜನರನ್ನು ನೇಮಕ ಮಾಡಲಾಗಿರುತ್ತದೆ. ಕೃಷಿ ಸಹಾಯಕರುಗಳ ನೇಮಕಾತಿಗೆ ಎಸ್.ಎಸ್.ಎಲ್.ಸಿ. ಇಲ್ಲವೇ ತತ್ಸಮಾನ ವಿದ್ಯಾರ್ಹತೆ ಜೊಂದಿದ್ದು 2ವರ್ಷಗಳ ಸೇವಾ ಪೂರ್ವ ತರಬೇತಿಯನ್ನು ರಾಜ್ಯದ ಯಾವುದಾದರೊಂದು ಗ್ರಾಮೀಣ ಅಭಿವೃದ್ಧಿ ತರಬೇತಿ ಕೇಂದ್ರದಲ್ಲಿ ಪೂರೈಸಬೇಕು.

ವಿಷಯ:- ರಾಜ್ಯದಲ್ಲಿನ ಸಹಕಾರಿ ಸಕ್ಕರೆ ಕಾರ್ಖಾನೆಗಳಿಂದ ರೈತರಿಗೆ ಹಣ ಸಂದಾಯದಲ್ಲಿ ವಿಳಂಬ.

1450 (1817) **ಶ್ರೀ ಜಗದೀಶ್ ಶೆಟ್ಟರ್ (ಹುಬ್ಬಳ್ಳಿ ಗ್ರಾಮೀಣ):-** ಮಾನ್ಯ ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?.

ಆ) ರಾಜ್ಯದಲ್ಲಿರುವ ಬಹುತೇಕ ಸಹಕಾರಿ ಸಕ್ಕರೆ ಕಾರ್ಖಾನೆಗಳು 1994-95ನೇ ಸಾಲಿನ ಕಬ್ಬಿನ ಕಟಾವಿನ ಅಂತಿಮ ಬಿಲ್ಲನ್ನು ಇನ್ನೂವರೆಗೂ ಸಂದಾಯ ಮಾಡದೇ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? ಸಂದಾಯಮಾಡದೆ ಇರಲು ಕಾರಣಗಳೇನು?

ಆ) ನಿಗದಿತ ಅವಧಿಯಲ್ಲಿ ಸಂದಾಯಮಾಡದೇ ಇರುವ ಸಹಕಾರ ಸಕ್ಕರೆ ಕಾರ್ಖಾನೆಗಳ ವಿರುದ್ಧ ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ ಉಮೇಶ್ ವಿ. ಕತ್ತಿ(ಸಕ್ಕರೆ ಸಚಿವರು):-

ಆ) ಬಂದಿದೆ. ಅಂತಿಮ ದರವನ್ನು ಪಾವತಿಸದಿರಲು ಮುಖ್ಯವಾಗಿ ಹಣಕಾಸಿನ ತೊಂದರೆ ಹಾಗೂ ಬಿಜಾಪುರ ಬೆಳಗಾವಿ ಜಿಲ್ಲೆಗಳ ಸಕ್ಕರೆ ಕಾರ್ಖಾನೆಗಳು ಕಂತುಗಳಲ್ಲಿ ಕಬ್ಬಿನ ಬಿಲ್ಲನ್ನು ಆಯಾ ವರ್ಷದ ಲೆಕ್ಕ ತಪಾಸಣೆ ಮುಗಿದ ಮೇಲೆ ಪಾವತಿಸುವ ಪದ್ಧತಿ.

ಆ) 1994-95ನೇ ಸಾಲಿನ ಕಬ್ಬಿನ ಅಂತಿಮ ದರವನ್ನು ಪಾವತಿಸದಿರುವ ಸಕ್ಕರೆ ಕಾರ್ಖಾನೆಗಳಿಗೆ ಪಾವತಿಸುವಂತೆ ಈಗಾಗಲೇ ಸೂಚನೆ ನೀಡಲಾಗಿದೆ.

ವಿಷಯ:- ಬಗರ್ ಹುಕುಂ ಸಕ್ರಮ ಸಮಿತಿಗಳ ರಚನೆ.

1451 (1792) **ಶ್ರೀ ಕೆ. ಎಂ. ಕೃಷ್ಣಮೂರ್ತಿ (ಕಡೂರು):-** ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಆ) ರಾಜ್ಯದ ಎಲ್ಲಾ ವಿಧಾನ ಸಭಾ ಕ್ಷೇತ್ರಗಳಲ್ಲಿ ಬಗರ್ ಹುಕುಂ ಸಕ್ರಮ ಸಮಿತಿಗಳ ರಚನೆಯಾಗಿದೆಯೆ? ಆಗಿದ್ದಲ್ಲಿ ಅವುಗಳ ಸಂಖ್ಯೆ ಎಷ್ಟು?

ಆ) ಕಡೂರು ವಿಧಾನ ಸಭಾ ಕ್ಷೇತ್ರದ ಸಮಿತಿ ರಚನೆಯಾಗಿಲ್ಲ ಎಂಬುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಇ) ಸಮಿತಿ ರಚನೆಯಾಗದಿದ್ದಲ್ಲಿ ಸಮಿತಿ ರಚಿಸಲು ಸರ್ಕಾರದವರು ಕ್ರಮ ಕೈಗೊಳ್ಳುವರೆ?

ಶ್ರೀ ರಮೇಶ್ ಸಿ. ಜಿಗಜಿಣಗಿ (ಕಂದಾಯ ಸಚಿವರು):-

ಅ) 167 ತಾಲ್ಲೂಕುಗಳಲ್ಲಿ ಬಗರ್‌ಹುಕುಂ ಸಾಗುವಳಿ ಸಕ್ರಮ ಸಮಿತಿ ರಚನೆಯಾಗಿರುತ್ತದೆ.

ಆ) ಕಡೂರು ತಾಲ್ಲೂಕು ಬಗರ್‌ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಯನ್ನು ದಿನಾಂಕ 31-7-96 ರಲ್ಲಿ ರಚಿಸಲಾಗಿದೆ.

ವಿಷಯ:- ಧಾರವಾಡ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳು.

1456 (2270) **ಶ್ರೀ ಮಂಜುನಾಥ ಸಿ. ಕುನ್ನೂರು (ಶಿಗ್ಗಾಂವ್):-** ಮಾನ್ಯ ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಧಾರವಾಡ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಹಿಳೆಯರಿಗೆ ತೆಗೆದುಕೊಂಡ ಕಾರ್ಯಕ್ರಮಗಳೇನು?

ಆ) ಧಾರವಾಡ ಜಿಲ್ಲೆಯಲ್ಲಿ ಎಷ್ಟು ಮಹಿಳಾ ಮಂಡಳಿಗಳು ಇವೆ. ಶಿಗ್ಗಾಂವ್ ಮತ್ತು ಸವಣೂರು ತಾಲ್ಲೂಕಿನಲ್ಲಿ ಇರುವ ಮಹಿಳಾ ಮಂಡಳಿಗಳು ಯಾವುವು? ಅವು ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಲಾಗಿದೆ?

ಶ್ರೀಮತಿ ವಿಮಲಾಬಾಯಿ ದೇಶ್‌ಮುಖ್ (ಮಹಿಳಾ ಮತ್ತು ಮಕ್ಕಳ ಕಲ್ಯಾಣ ರಾಜ್ಯ ಸಚಿವರು):-

ಅ) ಧಾರವಾಡ ಜಿಲ್ಲೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಿಂದ ಮಹಿಳೆಯರಿಗಾಗಿ ತೆಗೆದುಕೊಂಡ ಕಾರ್ಯಕ್ರಮಗಳು ಈ ಕೆಳಕಂಡಂತಿದೆ.

1. ಕೈಗಾರಿಕೆಯಲ್ಲಿ ವೃತ್ತಿ ತರಬೇತಿ.
2. ಟ್ರೈನಿಂಗ್ ಕಮ್ ಪ್ರೊಡಕ್ಷನ್ ಸೆಂಟರ್ (ತರಬೇತಿ ಮತ್ತು ಉತ್ಪಾದನಾ ಘಟಕ).
3. ಉದ್ಯೋಗಸ್ಥ ಮಹಿಳೆಯರಿಗಾಗಿ ವಸತಿ ಗೃಹ.
4. ದೇವದಾಸಿ ಪುನರ್ವಸತಿ.

ಆ) ಧಾರವಾಡ ಜಿಲ್ಲೆಯಲ್ಲಿ ಒಟ್ಟು 1454 ಮಹಿಳಾ ಮಂಡಳಿಗಳು ಇವೆ. ಇದರಲ್ಲಿ ನೋಂದಾವಣೆಯಾದ ಮಹಿಳಾ ಮಂಡಳಿಗಳು 1111 ಹಾಗೂ ನೋಂದಾವಣೆಯಾಗದಿರುವ ಮಹಿಳಾ ಮಂಡಳಿಗಳು 343.